ವಿದ್ಯುತ್ ಸರಬರಾಜು ಕಂಪನಿಗೂ ಸಹ ಕೇಂದ್ರ ಸರ್ಕಾರ ಮತ್ತು ಕ.ವಿ.ಪ್ರ.ನಿ.ನಿ.ನಡುವಿನ ಒಪ್ಪಂದದಂತೆ ಎ.ಪಿ.ಡಿ.ಆರ್.ಪಿ. ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಮುಖ್ಯ ಉದ್ದೇಶದಿಂದ ಪ್ಯಾಕೇಜ್ ಮಾಡಿ ಗುತ್ತಿಗೆನೀಡುತ್ತಿವೆ.

ಇ)ಮತ್ತು ಈ) ಕ.ವಿ.ಪ್ರ.ನಿ.ನಿ./ ವಿದ್ಯುತ್ ಸರಬರಾಜು ಕಂಪನಿಗಳು ಕೆಲವು ಮಾರ್ಗಸೂಚಿಗಳಿಂದ ಗುತ್ತಿಗೆದಾರರ ಅರ್ಹತೆ ಗುರುತಿಸಿ ಅವರಿಂದ ಮುಕ್ತ ಟೆಂಡರು ಕರೆದು, "ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕರ್ನಾಟಕ ಪಾರದರ್ಶಕತೆ" ಕಾಯಿದೆಯಂತೆ (ಕೆ.ಟಿ.ಪಿ.ಪಿ. ಆಕ್ಟ್) ಟೆಂಡರು ಮೌಲ್ಯಮಾಪನ ಮಾಡಿ ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಗಳ ಗುತ್ತಿಗೆ ನೀಡಲಾಗುತ್ತಿದೆ. ಈ ಅರ್ಹ ಗುತ್ತಿಗೆದಾರರಲ್ಲಿ ರಾಜ್ಯದ ಗುತ್ತಿಗೆದಾರರು ಮತ್ತು ರಾಜ್ಯದ ಹೊರಗಡೆಯ ಗುತ್ತಿಗೆದಾರರು ಇಬ್ಬರೂ ಸೇರಿದ್ದಾರೆ.

4815(5322) **ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ)**: ಮಾನ್ಯ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಣ್ಯಾಭಿವೃದ್ಧಿಯನ್ನು ಕಾರ್ಯಗತಗೊಳಿಸುತ್ತಿರುವ ಯೋಜನೆಗೆ 2003–04 ಮತ್ತು 2004–05ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರು ಮಾಡಲಾದ ಅನುದಾನದ ಮೊತ್ತ ಎಷ್ಟು;

ಆ) ಈ ಯೋಜನೆಗೆ ಕೇಂದ್ರಸರ್ಕಾರದಿಂದ ರಾಜ್ಯಕ್ಕೆ ಮಂಜೂರಾದ ಹಣದ ಮೊತ್ತ ಎಷ್ಟು;

ಇ) ಹೈದರಾಬಾದ್ ಕರ್ನಾಟಕ ವಿಭಾಗದ ಜಿಲ್ಲೆಗಳಲ್ಲಿ ಅರಣ್ಯಾಭಿವೃದ್ಧಿ ಕುರಿತು ಸರ್ಕಾರ ಹೊಸ ಯೋಜನೆಗಳನ್ನೇನಾದರೂ ರೂಪಿಸಿ ಜಾರಿಗಳಿಸುತ್ತಿದೆಯೇ;

ಈ) ಹಾಗಿದ್ದಲ್ಲಿ ಈ ಕುರಿತಾದ ವಿವರಗಳೇನು; ಯೋಜನೆಗಳಿಗಾಗಿ ವೆಚ್ಚ ಮಾಡಿದ ಮೊಬಲಗು ಎಷ್ಟು (ಸದರಿ ಜಿಲ್ಲೆಗಳ ಜಿಲ್ಲಾವಾರು ವಿವರ ನೀಡುವುದು);

ಉ) .ಬೀದರ್ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವಶದಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ ಎಷ್ಟು;

ಊ) ಸದರಿ ಜಮೀನಿನಲ್ಲಿ ಅರಣ್ಯಾಭಿವೃದ್ಧಿ ಕುರಿತಾದ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ; ಅದಕ್ಕಾಗಿ ಖರ್ಚುಮಾಡಿದ ಹಣದ ಮೊಬಲಗು ಎಷ್ಟು; (ತಾಲೂಕುವಾರು ವಿವರ ಒದಗಿಸುವುದು);

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು);

ಅ) ಅರಣ್ಯಾಭಿವೃದ್ಧಿಯನ್ನು ಕಾರ್ಯಗತಗೊಳಿಸುತ್ತಿರುವ ಯೋಜನೆಗೆ 2003-04 ಮತ್ತು 2004-05 ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರು ಮಾಡಲಾದ ಅನುದಾನದ ಮೊತ್ತದ ವಿವರ ಈ ಕೆಳಗಿನಂತಿದೆ:-

ಕ್ರ ಸಂ.	ಯೋಜನೆಯ ಹೆಸರು	2003-04	2004-05	ಒಟ್ಟು (ರೂ. ಲಕ್ಷಗಳಲ್ಲಿ)
1	ಜೆಬಿಐಸಿ ಪೂರ್ವ ಪ್ರಸ್ಥಭೂಮಿ ಯೋಜನೆ ಯಡಿ	8057.58	5431.74	13489.32
2	ರಾಜ್ಯ ವಲಯ ಯೋಜನೆಗಳು ಕ್ಷೀಣಿತ ಅರಣ್ಯಾಭಿವೃದ್ಧಿ ಯೋಜನೆ	118.00	198.28	316.28
3	ನಗರ ಪ್ರದೇಶ ಹಸರೀಕರಣ ಯೋಜನೆ	40.00	47.991	87.991
4	ಗಿರಿಜನ ಉಪ ಯೋಜನೆ	-	6.00	6.00
5	ವಿಶೇಷ ಘಟಕ ಯೋಜನೆ	-	43.26	43.26
6	ಏಷ್ಯಾಭಿವೃದ್ಧಿ ಬ್ಯಾಂಕ್ ನೆರವಿನ KUDCEM ಯೋಜನೆ	150.00	72.768	222.768
	ಒಟ್ಟು	**8365.58**	**5800.039**	**14165.619**

ಆ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಂಜೂರಾದ ಹಣದ ಮೊತ್ತದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಅರಣ್ಯಾಭಿವೃದ್ಧಿಗಾಗಿ

ದಿನಾಂಕ: 1-4-2005 ರಿಂದ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಯೋಜನೆ ಜಾರಿಗೆ ಬಂದಿರುತ್ತದೆ. ಅಲ್ಲದೆ NFWP ಯೋಜನೆ ಹಾಗೂ HKWB ಅನುದಾನಗಳಲ್ಲಿಯೂ ಸಹ ಅರಣ್ಯಾಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಈ) KSFM (Karnataka Sustainable Forest Management and Bio-diversity Conservation) ಹಾಗೂ NFWP (National Food for Work Programme) and HKWB (Hydrabad Karnataka Development Board Project) (ಯೋಜನೆಗಳು 2005-06ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಅವುಗಳಿಗೆ ನಿಗದಿಪಡಿಸಲಾದ ಅನುದಾನ ಈ ಕೆಳಗಿನಂತಿರುತ್ತದೆ.

2005-06ನೇ ಸಾಲಿಗೆ ನಿಗದಿಪಡಿಸಲಾದ ಅನುದಾನ (ರೂ.ಲಕ್ಷಗಳಲ್ಲಿ)

ಯೋಜನೆ	ಬೀದರ್ (ಪ್ರಾ)	ಗುಲ್ಬರ್ಗಾ (ಪ್ರಾ)	ರಾಯಚೂರು (ಪ್ರಾ)
KSFM& BC	131.74	142.664	43.44
NFWP & HKWB	–	–	–
ಒಟ್ಟು	131.74	142.664	43.44

ಯೋಜನೆ	ಬೀದರ್ (ಪ್ರಾ)	ಗುಲ್ಬರ್ಗಾ (ಪ್ರಾ)	ರಾಯಚೂರು (ಪ್ರಾ)	ಒಟ್ಟು
KSFM& BC	6.06	26.38	19.89	370.174
NFWP & HKWB	136.50	–	–	136.5
ಒಟ್ಟು	142.56	26.38	19.89	506.674

ಉ) ಬೀದರ್ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವಶದಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ 43,446.20 ಹೆಕ್ಟೇರ್.

ಊ) ಸದರಿ ಜಮೀನಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಅರಣ್ಯಾಭಿವೃದ್ಧಿಗಾಗಿ ಖರ್ಚು ಮಾಡಿದ ವಿವರಗಳು (ತಾಲ್ಲೂಕುವಾರು)

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವಿಭಾಗ	ತಾಲ್ಲೂಕು	2003–04	2004–05	ಒಟ್ಟು
1	ಬೀದರ್ (ಪ್ರಾ)	ಔರಾದ	3.913	9.130	13.043
		ಭಾಲ್ಲಿ	14.512	18.485	32.997
		ಬೀದರ್	37.921	45.617	83.538
		ಬಸವಕಲ್ಯಾಣ	25.711	47.229	72.94
		ಹುಮನಾಬಾದ್	73.528	85.800	159.328
2	ಬೀದರ್ (ಸಾ.ಅ.)	ಔರಾದ	28.143	20.585	48.728
		ಭಾಲ್ಕಿ	27.493	21.337	48.83
		ಬೀದರ್	56.564	31.205	87.769
		ಬಸವಕಲ್ಯಾಣ	48.671	47.101	95.772
		ಹುಮನಾಬಾದ್	27.880	29.626	57.506
		ಒಟ್ಟು	**344.336**	**356.115**	**700.451**

ಅನುಬಂಧ

UNSTAR 5322

ಕ್ರ ಸಂ.	ಯೋಜನೆ ಹೆಸರು	2003–04	2004–05	ಒಟ್ಟು (ರೂ. ಲಕ್ಷಗಳಲ್ಲಿ)
1	2	3	4	5
1	ಕಾಂಡ್ಲಾವನ ಸಂರಕ್ಷಣೆ ಮತ್ತು ಅಭಿವೃದ್ಧಿ	–	–	17.80
2	ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆ	45.80	19.54	65.34
3	ಕಿರು ಅರಣ್ಯ ಉತ್ಪನ್ನಗಳು	12.31	6.74	19.05
4	ಎಎಸ್‌ಟಿಆರ್‌ಪಿ	9.77	–	9.77

1	2	3	4	5
5	ಸಮಗ್ರ ಅರಣ್ಯೀಕರಣ ಮತ್ತು ಪರಿಸರಾಭಿವೃದ್ಧಿ ಯೋಜನೆ (ಪ್ರಾದೇಶಿಕ ವಿಭಾಗ)	119.04	–	119.04
6	ಎಣ್ಣೆ ಬೀಜ ಉತ್ಪನ್ನ ಸಸಿಗಳ ಅಭಿವೃದ್ಧಿ ಯೋಜನೆ (NOVOD)	–	32.25	32.25
7	ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ (NAP-FDA)	3166.73	1922.61	5089.34
8	ಹುಲಿ ಯೋಜನೆ ಬಂಡೀಪುರ ಮತ್ತು ನಾಗರಹೊಳೆ	191.51	366.00	557.51
9	ಹುಲಿ ಯೋಜನೆ ಭದ್ರಾ	200.72	166.51	367.23
10	ನೀಲಗಿರಿ ಬಯೋಸ್ಪಿಯರ್ ರಕ್ಷಣೆ	73.86	50.03	123.89
11	ಆನೆ ಯೋಜನೆ	157.50	179.19	336.69
12	ನಿಸರ್ಗ ಪ್ರವಾಸೋದ್ಯಮ	–	6.25	6.25
13	ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಸುತ್ತಮುತ್ತ ಗ್ರಾಮಗಳ ಪುನರ್‌ವಸತಿ	–	77.00	77.00
14	ಭದ್ರಾ ಅಭಯಾರಣ್ಯಗಳ ಪುನರ್‌ವಸತಿ	300.00	121.00	421.00
15	ಭಾರತ ಜೈವಿಕ ಅಭಿವೃದ್ಧಿ ಯೋಜನೆ	315.27	–	315.27
16	ಕೇಂದ್ರ ಪುರಸ್ಕೃತ ರಾಷ್ಟ್ರೀಯ ಉದ್ಯಾನವನ ಹಾಗೂ ಅಭಯಾರಣ್ಯಗಳ ಅಭಿವೃದ್ಧಿ	782.94	812.19	1595.13
	ಒಟ್ಟು	5375.45	3759.31	9134.76